

ಚಿತ್ರಗಳು: ಸೃಜನ್

ಆತನಿಗೆ ಕನ್ನಡ ಸರಿಯಾಗಿ ಮಾತಾಡಲೂ ಆಗದು, ಆದರೆ ಭಾಷೆಯನ್ನೂ ಮೀರಿದ ಬಾಂಧವ್ಯ ನಮ್ಮದು. ಅವನ ಜಾತಿ–ನೀತಿ–ನಂಬಿಕೆಗಳೂ ನಮ್ಮದಕ್ಕಿಂತ ತೀರಾ ಭಿನ್ನ, ಆದರೀಗ ಅವನು ಬೆಳೆದಿದ್ದನ್ನೇ ನಾವು ಉಣ್ಣುವುದು. ಅನ್ನಕ್ಕಿಲ್ಲದ ಜಾತಿ ನಮಗ್ಯಾಕೆ! ಈಗ ಸುಮಾರು ಆರು ವರ್ಷಗಳ ಹಿಂದೆ ಅವನನ್ನು ಮೊದಲ ಬಾರಿಗೆ ನಾನು ನೋಡಿದ್ದು.

ಹೊಸದಾಗಿ ತಲೆಯೆತ್ತುತ್ತಿದ್ದ ಬಡಾವಣೆಯೊಂದರಲ್ಲಿ ಬಹುತೇಕ ಮುಗಿಯುತ್ತಾ ಬಂದಂತಿದ್ದ ಅಪಾರ್ಟ್‌ಮೆಂಟ್ ನೋಡಲು ನಾನು, ಸುಜಿ ಹೋಗಿದ್ದ ಸಂದರ್ಭವದು. ಚುರುಕಾಗಿ ಓಡಾಡುತ್ತ ಎಲ್ಲರೊಂದಿಗೂ ಬಿಹಾರಿ ಮಿಶ್ರಿತ ಹಿಂದಿಯಲ್ಲಿ ಮಾತಾಡುತ್ತಿದ್ದ ಈತ ಗಮನ ಸೆಳೆದಿದ್ದ. ನೂರ ಹನ್ನೆರಡು ಮನೆಗಳ ಸಮುಚ್ಚಯದಲ್ಲಿ ನಾವೂ ಎರಡು ಬೆಡ್‌ರೂಮ್‌ಗಳ ಮನೆಯೊಂದನ್ನು ಕೊಂಡುಕೊಂಡೆವು. ಇನ್ನೂ ಕೆಲವು ಕೆಲಸಗಳು ನಮ್ಮ ಸಮುಚ್ಚಯದಲ್ಲಿ ಬಾಕಿ ಇದ್ದರೂ, ಅವುಗಳನ್ನು ಆರು ತಿಂಗಳಲ್ಲಿ ಮುಗಿಸುವುದಾಗಿ ಬಿಲ್ಡರ್ ಭರವಸೆ ನೀಡಿದ್ದರಿಂದ,